# 11

# ಯೇಸುವಿನ ಸಭೆ: ನಿಯೋಗ

## (ಮಿಶನ್)

ಯೇಸುವಿನ ಸಭೆಯ ಇತರ ವಿಶೇಷವಾದ ಗುರುತುಗಳನ್ನು ಹೇಳಬಹುದು.[1] ಆದರೆ ನಾನು ಇನ್ನೊಂದನ್ನು ಮಾತ್ರ ಚರ್ಚಿಸುತ್ತೇನೆ. ಆಮೇಲೆ ನಮ್ಮ ಅಧ್ಯಯನದ ಈ ಭಾಗವನ್ನು ಮುಗಿಸುತ್ತೇನೆ.

### ಸಭೆಗೆ ಸವಾಲು

ಸಭೆಯು ದೈವೀಯ ನಿಯೋಗದೊಂದಿಗೆ ಇರುವ ದೈವೀಯ ಸಂಸ್ಥೆಯಾಗಿದೆ. ಯೇಸು ಒಂದು ಸಲ ತನ್ನ ನಿಯೋಗವನ್ನು ಈ ಮಾತುಗಳಲ್ಲಿ ವಿವರಿಸಿದನು: "ಮನುಷ್ಯ ಕುಮಾರನು ನಶಿಸು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" (ಲೂಕ 19:10). ಆತನ ಸಭೆಗೂ ಅದೇ ಉದ್ದೇಶವಿರುವುದು. ಅನೇಕ ಗುರಿಗಳು ಪ್ರಾಮುಖ್ಯವಾದವುಗಳು ಆದರೆ ಒಂದು ಮಾತ್ರ ಅಗತ್ಯವಾದದ್ದು: ಅದು ಪರಲೋಕಕ್ಕೆ ಹೋಗುವುದು. "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?" (ಮತ್ತಾಯ 16:26ಎ).

ಸಭೆಯ ಆಹ್ವಾನವು "ನಶಿಸು ಹೋಗಿರುವದನ್ನು ಹುಡುಕಿ ರಕ್ಷಿಸುವುದು" ಎಂಬುದನ್ನು ಮೂರು ಜವಾಬ್ದಾರಿಕೆಗಳಲ್ಲಿ ವಿಭಾಗಿಸಬಹುದು:

(1) ಸುವಾರ್ತೆ ಸೇವೆ. "Evangelize" ಎಂಬ ಪದದ ಅರ್ಥ "(ಯೇಸುವಿನ ಬಗ್ಗೆ) ಶುಭ ವಾರ್ತೆಯನ್ನು ಹೇಳುವುದು." ಯೇಸುವಿನ ಮಹಾ ಆಜ್ಞೆಯಲ್ಲಿ ಸುವಾರ್ತೆ ಸಾರುವ ಜವಾಬ್ದಾರಿಕೆಯು ಕೊಡಲ್ಪಟ್ಟಿದೆ:

> ಆದ್ದರಿಂದ ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವ ಹಾಗೆ ಅವರಿಗೆ ಉಪದೇಶ ಮಾಡಿರಿ. ಇಗೋ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇದ್ದೇನೆ (ಮತ್ತಾಯ 28:19, 20).

> ... ನೀವು ಸರ್ವ ಲೋಕಕ್ಕೆ ಹೋಗಿ ಸರ್ವ ಸೃಷ್ಟಿಗೆ ಸುವಾರ್ತೆಯನ್ನು ಪ್ರಕಟಿಸಿರಿ. ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು (ಮಾರ್ಕ 16:15, 16).

ಪ್ರತಿಯೊಬ್ಬ ಕ್ರೈಸ್ತನು ತಾನು ಸಂದರ್ಶಿಸುವವರಿಗೆ ಯೇಸುವಿನ ಬಗ್ಗೆ ಹಾಗೂ ಆತನ ಮಾರ್ಗದ ಬಗ್ಗೆ ಬೋಧಿಸಬೇಕು.

(2) ಭಕ್ತಿವೃದ್ಧಿ ಮಾಡುವುದು. "Edifiy" ಎಂಬ ಪದದ ಅರ್ಥ "ಕಟ್ಟುವುದು"

ಎಂದಾಗುವುದು. ಬೋಧಿಸುವುದರಿಂದಲೂ ಪ್ರೋತ್ಸಾಹಿಸುವದರಿಂದಲೂ ಕ್ರೈಸ್ತರು ಒಬ್ಬರಿಗೊಬ್ಬರು ಕಟ್ಟಬೇಕು. ಈ ಆಹ್ವಾನವು ಕಂಡುಬರುವ ಒಂದು ಸ್ಥಳವು ಎಫೆಸ 4:15, 16ರಲ್ಲಿದೆ:

> ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು; ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತವೆ.

(3) ಪರೋಪಕಾರ: "ಪರೋಪಕಾರ" ಎಂಬುದು "ಇತರರು ಚೆನ್ನಾಗಿರಲಿ ಎಂದು ನಾವು ಬಯಸುವ" ಕಾರಣದಿಂದ ಇತರರಿಗೆ ಸಹಾಯ ಮಾಡುವದನ್ನು ಸಂಬಂಧಿಸಿದೆ. ಪರೋಪಕಾರವು ಕೊರತೆಗಳನ್ನು, ಆಹಾರ ಹಾಗೂ ಬಟ್ಟೆಯಂಥ ಪ್ರಾಪಂಚಿಕ ವಸ್ತುಗಳನ್ನೊಳಗೊಂಡು ಪೂರೈಸುವದನ್ನು ಸಾಮಾನ್ಯವಾಗಿ ಒಳಗೊಂಡಿರುವುದು. ಇತರರಿಗೆ ಸಹಾಯ ಮಾಡುವ ಜವಾಬ್ದಾರಿಕೆಯ ಬಗ್ಗೆ ಹೊಸ ಒಡಂಬಡಿಕೆಯ ಅನೇಕ ವಚನಗಳು ಮಾತಾಡುತ್ತವೆ.

> ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವುದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ (ಯಾಕೋಬ 1:27).

> ಆದುದರಿಂದ, ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ವಿಶ್ವಾಸದ ಮನೆತನದವರಿಗೆ ಮಾಡೋಣ (ಗಲಾತ್ಯ 6:10).

ಸಭೆಗೆ - ಯಾವುದೇ ಸಭೆಗೆ - ಹಲವಾರು ಚಟುವಟಿಕೆಗಳಲ್ಲಿ ಮುಳುಗಿ ತನಗೆ ದೇವರು ಕೊಟ್ಟ ನಿಯೋಗವನ್ನು (ಮಿಶ್ಯನನ್ನು) ಮರೆತುಬಿಡುವುದು ಸುಲಭವಾಗಿರುವುದು.

## ನಿಮಗೆ ಸವಾಲು

ನಾವು ಒಂದಾಗಿ ಮಾಡುವ ಅಧ್ಯಯನವು ಪರಿಣಾಮಕಾರಿಯಾಗ ಬೇಕಾದರೆ, ಅದು ವೈಯಕ್ತಿಕವಾದದ್ದೂ ವ್ಯಾವಹಾರಿಕವಾದದ್ದೂ ಆಗಿರತಕ್ಕದ್ದು. ಇದನ್ನೊಳಗೊಂಡು ಯೇಸುವಿನ ಸಭೆಯ ಮೇಲಿನ ಆರು ಪಾಠಗಳನ್ನು ನೀವು ಪುನರಾವಲೋಕನ ಮಾಡ ಬೇಕೆಂದು ಬಯಸುತ್ತೇನೆ. ಆಮೇಲೆ ಕರ್ತನ ಸಭೆಯ ಬಗ್ಗೆ ಹೊಸ ಒಡಂಬಡಿಕೆಯು ಏನು ಬೋಧಿಸುತ್ತದೆ ಎಂಬುದರೊಂದಿಗೆ ಕೆಲವು ಧಾರ್ಮಿಕ ಸಂಸ್ಥೆಗಳನ್ನು ನೀವು ಹೋಲಿಸ ಬೇಕೆಂದು ಬಯಸುತ್ತೇನೆ, ಇದಕ್ಕಾಗಿ ಯಾವುದೇ ಧಾರ್ಮಿಕ ಸಂಸ್ಥೆಯನ್ನು ನೀವು ಆಯ್ದು ಕೊಳ್ಳಬಹುದು. (ಅದು ನಿಮಗೆ ಮೆಚ್ಚಿಗೆಯಾದದ್ದಾಗಿರ ಬಹುದು ಇಲ್ಲವೇ ಮೆಚ್ಚಿಗೆ ಯಾಗದೇ ಇರುವದು ಆಗಿರಬಹುದು.) ವ್ಯತ್ಯಾಸಕಂಡು ಹಿಡಿಯುವದಕ್ಕಾಗಿ ನಿಮ್ಮನ್ನು ಪ್ರೋತ್ಸಾಹಿಸಲು ಈ ಪ್ರಯೋಗವಾಗಿದೆ. ನಿಮ್ಮ ಹೋಲಿ ಕೆಯಲ್ಲಿ ನಿಮಗೆ ಸಹಾಯ ಮಾಡಲು ಪ್ರಶ್ನೆಗಳ ಒಂದು ಪಟ್ಟಿಯನ್ನು ನೀವು ಮೊದಲು

ಮಾಡಲು ಬಯಸಬಹುದು.

ಈ ರೀತಿಯ ಸಾಮಾನ್ಯ ಪ್ರಶ್ನೆಗಳನ್ನು ನೀವು ಕೇಳಲು ಅಪೇಕ್ಷಿಸಬಹುದು.

- ದೇವರಲ್ಲಿ, ಯೇಸುವಿನಲ್ಲಿ ಮತ್ತು ಬೈಬಲಿನಲ್ಲಿ ನಂಬುವ, ದೇವರಿಗೆ ಭಯಪಡುವ ಸಭೆ ಇದಾಗಿದೆಯೋ?
- ದೇವರನ್ನು ಮೆಚ್ಚಿಸುವದಕ್ಕೆ ಮತ್ತು ಜನರನ್ನು ಬಲಪಡಿಸುವದಕ್ಕೆ ಸಮರ್ಪಿಸಿಕೊಂಡ ಸಭೆ ಇದಾಗಿದೆಯೋ?

ನಮ್ಮ ಅಧ್ಯಯನಗಳಿಗೆ ಸಂಬಂಧಿಸಿದ ಸ್ಪಷ್ಟವಾದ ಪ್ರಶ್ನೆಗಳನ್ನು ಕೇಳಲು ನೀವು ಬಯಸುವಿರಿ:

- ಈ ಸಭೆಯು ಸತ್ಯವೇದಕ್ಕೆ ಸಂಬಂಧಿಸಿದ ಹೇಸರನ್ನು ಧರಿಸಿರುವುದೋ?
- ಈ ಸಭೆಯು ಲೇಖನಾನುಸಾರವಾಗಿ ಸಂಘಟಿಸಲ್ಪಟ್ಟಿ ರುವುದೋ?
- ಇದರ ಪ್ರಸಂಗಿಗಳು "ಪಾಸ್ಟರರು" ಎಂದು ಕರೆಯಲ್ಪಡುವರೋ? "ರೆವರಂಡ್" ದಂಥ ಪರಿಶುದ್ಧ ಲೇಖನಾನುಸಾರವಲ್ಲದ ಬಿರುದು ಗಳನ್ನು ಧರಿಸುವುದೋ?
- ಲೇಖನಾನುಸಾರವಾಗಿ ಈ ಸಭೆ ಆರಾಧನೆ ಮಾಡುತ್ತದೋ? ಪ್ರತೀ ವಾರದ ಮೊದಲನೆಯ ದಿನದಂದು ಕರ್ತನ ಭೋಜನ ಆಚರಿಸುವುದೋ? ತನ್ನ ಆರಾಧನೆಯಲ್ಲಿ ಇದು ಕೇವಲ ಬಾಯ್ದೆರ ಸಂಗೀತವನ್ನು ಮಾತ್ರ ಉಪಯೋಗಿಸುವುದೋ?

ನಿಮ್ಮ ಪ್ರಶ್ನೆಗಳ ಪಟ್ಟಿ ಮಾಡುವಾಗ ಸಭೆಯ ಆಂತರ್ಯಕ್ಕೆ ಸಂಬಂಧಿಸಿದವು ಗಳನ್ನು ಅಲಕ್ಷಿಸಬೇಡಿರಿ. ಯೇಸು ಹೇಳುತ್ತಾನೆ:

> ... ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸ ಬೇಕೆಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದೆಂದರೆ - ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ (ಮತ್ತಾಯ 22:37-39).

ಇಂಥ ಆಜ್ಞೆಗಳಿಗೆ ವಿಧೇಯರಾಗಲು ನಿಮಗೆ ಪ್ರೋತ್ಸಾಹ ದೊರೆಯುವಲ್ಲಿ ನೀವು ಕೆಲಸ ಮಾಡಲು ಮತ್ತು ಆರಾಧನೆ ಮಾಡಲು ಬಯಸುವಿರಿ.

ಈ ಪ್ರಯೋಗದ ಕೊನೆಯ ಒಂದು ಭಾಗವಾಗಿ, ಕ್ರಿಸ್ತನ ಒಂದು ಸ್ಥಳಿಕ ಸಭೆಯೊಂದಿಗೆ ನಿಮ್ಮ ಪಟ್ಟಿಯನ್ನು ಹೋಲಿಸಿರಿ. ಕ್ರಿಸ್ತನ ಸಭೆಗಳು ಮೊದಲನೆಯ ಶತಮಾನದ ಸಭೆಯಂತೆ ಪುನಃ ಸ್ಥಾಪಿಸಿರುವೆವೆಂದು ಹೇಳುತ್ತವೆ. ಕ್ರಿಸ್ತನ ಸಭೆಗಳು "ಬೈಬಲ್ ಮಾತಾಡುವಲ್ಲಿ ಮಾತಾಡುತ್ತೇವೆ" ಮತ್ತು "ಬೈಬಲ್ ಮೌನವಾಗಿರುವಲ್ಲಿ ಮೌನವಾಗಿರುತ್ತೇವೆ" ಎಂದು ಹೇಳಿ ಕೊಳ್ಳುತ್ತವೆ. ಅವುಗಳ ಹೇಳಿಕೆಗಳನ್ನು ಆಹ್ವಾನಿಸಿರಿ (ಅಪೊಸ್ತಲರ ಕೃತ್ಯ 17:11).

## ಮುಕ್ತಾಯ

ಯೇಸುವಿನ ಸಭೆಯು ದೇವರ "ನಿತ್ಯ ಉದ್ದೇಶದ" ಭಾಗವಾಗಿರುವುದು (ಎಫೆಸ 3:10, 11). "ಕ್ರೈಸ್ತ ಸಭೆಯ ಮೂಲಕವಾಗಿ ದೇವರ ನಾನಾವಿಧವಾದ ಜ್ಞಾನವು ಗೊತ್ತು ಮಾಡಲ್ಪಟ್ಟಿದೆ" (ಎಫೆಸ 3:10). ಸಭೆಯಲ್ಲಿ ದೇವರ ಮಹಿಮೆಯು ಹೊಳೆಯುತ್ತದೆ (ಎಫೆಸ 3:21). ಸಭೆಯು "ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ" (1 ತಿಮೊಥಿ 3:15). ಸಭೆಯ ನಮ್ಮ ಅಧ್ಯಯನವು ನೀವು ಅದನ್ನು ಹೆಚ್ಚಾಗಿ ಮೆಚ್ಚಿಕೊಳ್ಳುವಂತೆ ಮಾಡಿದೆಯೆಂದು ನಾನು ನಿರೀಕ್ಷಿಸಿದ್ದೇನೆ. ದೇವರ ಅದ್ಭುತವಾದ ಹಾಗೂ ಪ್ರಸಿದ್ಧವಾದ ಕೊಡುಗೆಗಳಲ್ಲಿ ಅದು ಒಂದಾಗಿದೆ.

ಇಂದು ಕರ್ತನ ಸಭೆಯನ್ನು ಗುರುತಿಸುವುದೂ ಅದರ ಭಾಗವಾಗಿರುವುದೂ ಮುಖ್ಯವಾದ ಸಂಗತಿಯಾಗಿದೆ, ಬಹು ಸಂಖ್ಯೆಯಲ್ಲಿ ಸಭೆಗಳು ಅಸ್ತಿತ್ವದಲ್ಲಿರುವುದು ಗಲಿಬಿಲಿ ಗೊಳಿಸುತ್ತದೆಯೋ? ಹೌದು, ಗಲಿಬಿಲಿಯ ಮಧ್ಯದಲ್ಲಿ ಯೇಸುವಿನ ಸಭೆಯನ್ನು ಕಂಡುಕೊಳ್ಳುವುದು ಸುಲಭವೋ? ಇಲ್ಲ, ಆದಾಗ್ಯೂ ದೇವರ ಸಹಾಯದಿಂದ ನಾವು ಅದನ್ನು ಮಾಡಬಹುದು, "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13) ಎಂದು ಹೇಳಿದ ಪೌಲನ ಸಕಾರಾತ್ಮಕ ಮನೋಭಾವನೆಯುಳ್ಳವರಾಗಿರಿ.

---

ಟಿಪ್ಪಣಿ

[1]ಕರ್ತನ ಸಬೆಯ ವಿಶೇಷವಾದ ಗುರುತುಗಳು ಅದು ಸ್ಥಾಪಿಸಲ್ಪಟ್ಟಾಗ ಮತ್ತು ಸ್ಥಾಪಿಸಲ್ಪಟ್ಟಲ್ಲಿ ಒಳಗೊಂಡಿರುತ್ತವೆ (ಅಪೊಸ್ತಲರ ಕೃತ್ಯ 2) ಮತ್ತು ಸಭೆಯ ಏಕತೆಯ ಮೇಲೆ ಅದರ ಪ್ರಾಮುಖ್ಯತೆ ಕೊಡಲ್ಪಟ್ಟಿದೆ (ಯೋಹಾನ 17:20, 21; 1 ಕೊರಿಂಥ 1:10-13; ಎಫೆಸ 4:4-6).

© 2009 Truth for Today